# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/475/10-11

ದಿನಾಂಕ :14-10-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ಪಕ್ಕೀರಮ್ಮ ಗಂಡ ಪರಸಪ್ಪ,ಬಳ್ಳಾರಿ<br><br>(ಶ್ರೀ ಸಿ ನಾಗೇಶ ಮತ್ತು<br>ಎನ್. ಎಸ್. ಮಲ್ಲನಗೌಡ, ವಕೀಲರು, ಬಳ್ಳಾರಿ) | 1. ವಿಶೇಷ ತಹಶೀಲ್ದಾರರು, ಕುರುಗೋಡು<br>2. ಕಂ.ನಿ. ಕುರುಗೋಡು<br>3. ಜಾನೆಕುಂಟೆ ತಿಮ್ಮಪ್ಪ ತಂದೆ ಹನುಮಂತಪ್ಪ, ಕುಡತಿನಿ ಗ್ರಾಮ ಬಳ್ಳಾರಿ ತಾ::<br>(ಶ್ರೀ ಮಲ್ಲೇಶ ನಾಯ್ಕ ವಕೀಲರು ಬಳ್ಳಾರಿ) |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕುಡುತಿನಿ | 1194/ಎ/3 | 4.00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂ.ನಿ. ಕುರುಗೋಡು ರವರ ಎಂ.ಆರ್.ನಂ. 117/2009-10 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 29-03-2011, 10-02-2012, 06-02-2015, 07-04-2015, 06-11-2015, 20-05-2016, ಮತ್ತು 14-10-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು ದಿನಾಂಕ: 14-10-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಕುಡುತಿನಿ ಗ್ರಾಮದ ಸ.ನಂ 1194/ಎ/3 ವಿಸ್ತೀರ್ಣ: 4.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂ.ನಿ. ಕುರುಗೋಡು ರವರ ಎಂ.ಆರ್.ನಂ. 117/2009-10 ರನ್ನು ರದ್ದು ಪಡಿಸಲು ಕೋರುತ್ತಾ, ಸದರಿ ಜಮೀನನ್ನು ಮೇಲ್ಮನವಿದಾರರು ನೊಂದಾಯಿತ ಕ್ರಯ ಪತ್ರ 3748/80-81 ದಿನಾಂಕ 05-12-1980 ರನ್ವಯ ಖರೀದಿಸಿದ್ದು, ಸದರಿ ನೊಂದಾಯಿತ ಖರೀದಿ ಪತ್ರದನ್ವಯ ಹಕ್ಕು ದಾಖಲಿಸುವಂತೆ ಕೋರಿರುತ್ತಾರೆ.

ಮುಂದುವರೆದು ಪ್ರಕರಣದಲ್ಲಿಯ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ಹಕ್ಕು ಬದಲಾವಣೆ ಸಂಖ್ಯೆ 117/09-10 ದಿನಾಂಕ 30-12-2009 ಈ ಕಾರ್ಯಾಲಯದ ಆದೇಶ **ಅಪೀಲು 292/08-09 ದಿನಾಂಕ 29-08-2009** ರನ್ವಯ ಪ್ರತಿವಾದಿ 3 ರವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಗಿರುತ್ತದೆ. ಕಾರಣ ಈ ಕಾರ್ಯಾಲಯದ ಆದೇಶ ವನ್ನು ಪುನಃ ಇದೇ ಕಾರ್ಯಾಲಯದಲ್ಲಿ ಪ್ರಶ್ನಿಸುವುದು ಸಮಂಜಸವಾಗಿರುವುದಿಲ್ಲ ಮತ್ತು ಕಾನೂನುಬದ್ದವಾಗಿರುವುದಿಲ್ಲ ಆದುದರಿಂದ ಸದರಿ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.